**ಚಿಂತನಶೀಲ ಬರಹ**

‘ಕಥೆ ಹೇಳುವೆ ನನ್ನ ಕಥೆ ಹೇಳುವೆ’, ಪ್ರೀತಿ ನಾಗರಾಜ್ ಅವರ ಮುಖಪುಟ ಲೇಖನ (ಸುಧಾ, ಅ.25) ಚಿಂತನಶೀಲವಾಗಿದೆ. ನೋವು ಅನುಭವಿಸಿ ಯಾರಿಗೂ ಹೇಳದ ಸ್ಥಿತಿಯಲ್ಲಿ ಬದುಕು ನೂಕುತ್ತಿರುವ ಮಹಿಳೆಯರ ಆಂತರಿಕ ಧ್ವನಿಯನ್ನು ಪ್ರತಿನಿಧಿಸುವ ‘ಮೀ...ಟೂ’ ಇತ್ತೀಚಿನ ದಿನಗಳಲ್ಲಿ ಬಹಳ ಸುದ್ದಿಯಲ್ಲಿರುವ ವಿದ್ಯಮಾನ. ಉದ್ಯೋಗದ ಸ್ಥಳಗಳಲ್ಲಿ ಹೆಣ್ಣು ಮಕ್ಕಳ ಶೋಷಣೆ ಹೊಸ ವಿಷಯವೇನಲ್ಲ. ಅನುಭವಿಸಿದ ಸಂಕಟ, ನೋವುಗಳನ್ನು ಅಭಿವ್ಯಕ್ತಗೊಳಿಸುವಲ್ಲಿ ಸಾಮಾಜಿಕ ಜಾಲತಾಣ ಅವರಿಗೆ ನೆರವಾಗಿದೆ.

—ಮೀನಾಕ್ಷಿ ಕೆ. ರಾಮಗುಂಡಿ, ಬೈಲಹೊಂಗಲ, ಕೆ.ವಿ. ರಾಜಲಕ್ಷ್ಮಿ ಬೆಂಗಳೂರು, ಎಂ.ಮೃತ್ಯುಂಜಯಪ್ಪ ಚಿತ್ರದುರ್ಗ, ಮಧುರ ಸುಬ್ರಹ್ಮಣ್ಯ ಬೆಂಗಳೂರು, ಪಿ.ಗೋವಿಂದರಾಜ್ ಶಿವಮೊಗ್ಗ, ಕೋಟೇಶ್ವರ ಸೂರ್ಯನಾರಾಯಣರಾವ್ ಬೆಂಗಳೂರು

**ಭಯ, ಆತಂಕ..**

ಮುಖಪುಟ ಚಿತ್ರ, ಲೇಖನಗಳು, ವಿದೇಶದಲ್ಲಿ ಆರಂಭವಾಗಿ ನಮ್ಮಲ್ಲಿಗೂ ಹರಡಿ, ನಾಳಿನ ಸಂಚಿಕೆಯಲ್ಲಿ ಏನಾಗುತ್ತದೋ ಎಂಬ ಕುತೂಹಲ, ಭಯ, ಆತಂಕಗಳನ್ನು ಒಳಗೊಂಡ ಧಾರಾವಾಹಿಯಾಗುವಂತೆ ತೋರುತ್ತದೆ.

—ಡಾ. ಕೆ.ಕೆ. ಜಯಚಂದ್ರ ಗುಪ್ತ, ಹಾಸನ

**ಸಮಾನ ಅವಕಾಶ ಸಿಗಲಿ**

‘ಸಾಸಿವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ ಕಾರಣ’ ನುಡಿ ಈ ಸಂದರ್ಭದಲ್ಲಿ ಎಷ್ಟೊಂದು ಅರ್ಥಪೂರ್ಣವಾಗಿ ಕಾಣಿಸುತ್ತದೆ. ಮೀ...ಟೂ ಚಳವಳಿಯ ಕಥನಗಳನ್ನು, ಖ್ಯಾತನಾಮರ ಕಥಾನಕಗಳನ್ನು ಓದಿದಾಗ ಗಂಡು ಜಾತಿಯ ಬಗ್ಗೆಯೇ ಜಿಗುಪ್ಸೆ ಹುಟ್ಟುತ್ತದೆ. ಭವಿಷ್ಯದಲ್ಲಿ ನಮ್ಮ ಹೆಣ್ಣು ಮಕ್ಕಳಿಗೆ ಸಮಾನ ಅವಕಾಶ, ನಿರ್ಭೀತ ವಾತಾವರಣ ನಿರ್ಮಾಣವಾಗಲಿ.

—ಕೇಶವ ಪ್ರಭು, ಶಿವಮೊಗ್ಗ

**ಅಭಿಯಾನ ಸ್ವಾಗತಾರ್ಹ**

‘ಮೀ...ಟೂ’ ಅಭಿಯಾನ ಪುರುಷರ ‘ಅಹಂ’ಗೆ ಒಳಗಾಗಿ ಶೋಷಿತರಾದ ಮಹಿಳೆಯರಿಗೆ ಸಾಂತ್ವನ ಕೊಡುವಲ್ಲಿ ಒಂದು ಆಶಾಕಿರಣವಾಗಿದೆ.

—ಕೊಹಿಮ, ಬಸರಕೋಡು

**ವಿಚಾರಲಹರಿ**

‘ವಿಚಾರಲಹರಿ’ಯಲ್ಲಿ ‘ಬಿತ್ತುವವನ ಕತೆ’ (ಅಮೃತಮತಿ) ಬರಹದಲ್ಲಿ ಏಸುಸ್ವಾಮಿಯವರ ಪ್ರಸಂಗಗಳನ್ನು ಇನ್ನೂ ಸ್ವಾರಸ್ಯಕರವಾಗಿ ಹೇಳಬಹುದಿತ್ತು.

– ಎ. ಜಾನಕಿರಾಮ್, ಬೆಂಗಳೂರು

**ನಾವೇ ಹೊಣೆ**

‘ಸಂಬಂಜ ಅನ್ನಾದು ದೊಡ್ಡದು ಕನಾ..’ (ಡಾ.ಲೀಲಾವತಿ ದೇವದಾಸ್) ಲೇಖನ ಚೆನ್ನಾಗಿದೆ. ನಂಬಿಕೆಗಳು ಜೀವನದಲ್ಲಿ ಹಾಸು ಹೊಕ್ಕಾಗಿದ್ದಾಗ ನೆಮ್ಮದಿಯಿಂದ ಜೀವನ ನಡೆಸುತ್ತಿದ್ದ ಜನರು ಆಧುನಿಕ ಜೀವನ ಶೈಲಿಯಿಂದ ನಮ್ಮ ಕೈಯಾರೆ ನಾವೇ ಆರೋಗ್ಯ ಹಾಳು ಮಾಡಿಕೊಂಡು ಅಶಾಂತಿಯ ಜೀವನ ನಡೆಸುತ್ತಿದ್ದೇವೆ. ಇದಕ್ಕೆ ನಾವೇ ಹೊಣೆ.

– ಪುಷ್ಪಾ ಶ್ರೀರಾಮ್, ಬೆಂಗಳೂರು




**ಫ್ಯಾಷನ್ ಟ್ರೆಂಡ್**

ಫ್ಯಾಷನ್ ಅಂಕಣದಲ್ಲಿ ‘ಅಂಗಿ ಟೈಟು, ಲೂಸು ಯಾಕೆ, ಹೇಗೆ?’ (ವಿಶಾಖ. ಎನ್.) ಬರಹ ಸಕಾಲಿಕ. ಈಗಿನ ಸಿನಿಮಾ ಅಥವಾ ಕಿರು ಚಿತ್ರಗಳಲ್ಲಿ ಸುತ್ತು ಬಳಸಿ ನೋಡುಗರ ಕಣ್ಣಿಗೆ ಸ್ಕಿನ್‌ಫಿಟ್ ಮಾರುಕಟ್ಟೆಯೇ ರಾಚುತ್ತಿರುವಂತಿದೆ. ಫ್ಯಾಷನ್ ಟ್ರೆಂಡ್ ಅತಿರೇಕ ಸಹಿಸಲಾಗದು!

—ರಾಜಶೇಖರ ಹಾದಿಮನಿ, ಧಾರವಾಡ

**ಎಚ್ಚರಿಕೆ ಪಾಠ**

‘ನಿಮ್ಮೊಡನೆ’ಯಲ್ಲಿ ‘ಹವಾಮಾನ ವ್ಯತ್ಯಯ ವಿಳಂಬ ಸಲ್ಲದು’ (ರಘುನಾಥ ಚ.ಹ.) ಬರಹ ಸಮಾಜಕ್ಕೆ ಎಚ್ಚರಿಕೆಯ ಗಂಟೆ ನೀಡಿದಂತಿದೆ.

—ಮಹಾವೀರ ಕಾಸರ, ಶಿವಮೊಗ್ಗ

**ಆಹಾ! ಆಫ್ರಿಕಾ...**

‘ಆಹಾ ಆಫ್ರಿಕಾ’ (ಶ್ಯಾಮಲಾ ಗುರುಪ್ರಸಾದ್) ದಕ್ಷಿಣ ಆಫ್ರಿಕಾದ ಪ್ರವಾಸ ಕಥನ ಮಾಹಿತಿಪೂರ್ಣ. ಆಫ್ರಿಕಾ ಕಾಡುಗಳಲ್ಲಿರುವ ವಿವಿಧ ಪ್ರಾಣಿಗಳು, ಅವುಗಳ ಸ್ವಭಾವ, ಸ್ವಚ್ಛಂದ ಬದುಕು.. ಇವೆಲ್ಲವನ್ನೂ ವಿವರಿಸುವ ರೀತಿ ಮೆಚ್ಚತಕ್ಕದ್ದು.

—ಎಸ್. ಚನ್ನಪ್ಪ, ಮೈಸೂರು

**ವಿಶಿಷ್ಟ ಅನುಭವ**

‘ಮಿಟ್ಟೆನ್ ವಾಲ್ಡ್’ (ಎಸ್.ಪಿ. ವಿಜಯಲಕ್ಷ್ಮಿ) ಪ್ರವಾಸ ಚಿತ್ರ ಲೇಖನ ಓದಿ ವಿಶಿಷ್ಟ ಅನುಭವ ನೀಡಿತು.

—ಪ್ರಾರ್ಥನಾ ಹೇಮಂತಕುಮಾರ, ಬೆಂಗಳೂರು, ಪ್ರಭಾ ಪ್ರಸಾದ್ ಬೆಂಗಳೂರು

**ಕಥೆ ಚೆನ್ನಾಗಿದೆ**

ಮಿನಿ ಕಥೆ ‘ಆಪರೇಷನ್ ಥಿಯೇಟರ್‌ನಲ್ಲಿ ಹಸು’ (ಡಾ. ಸಲೀಮ್ ನದಾಫ್) ಚೆನ್ನಾಗಿದೆ.

– ಸುಂದರ್, ಬೆಂಗಳೂರು

**ಭರವಸೆಯ ಪೃಥ್ವಿ ಶಾ**

ಕ್ರೀಡಾಲೋಕ ಪುಟದಲ್ಲಿ ‘ಕ್ರಿಕೆಟ್ ಅಂಗಳದ ನವತಾರೆ’ ಲೇಖನ (ಗಿರೀಶ ದೊಡ್ಡಮನಿ) ಗಮನ ಸೆಳೆಯಿತು. ಪೃಥ್ವಿ ಶಾ ಎನ್ನುವ ಕ್ರಿಕೆಟ್‌ನ ನವತಾರೆ ಉದಯವಾಗಿ ಬಿಟ್ಟಿದೆ. ‘ಮತ್ತೊಬ್ಬ ಸಚಿನ್’ ಎನ್ನುವ ಭರವಸೆಯ ಮಹಾಗಾಳಿ!

—ಎಚ್. ಆನಂದ್‌ಕುಮಾರ್, ಚಿತ್ರದುರ್ಗ, ಮುಕುಂದ ಹೆರಕಲ್ಲ, ಕಲಬುರ್ಗಿ, ರತ್ನಾಕರ ಹೆಗಡೆಕಟ್ಟೆ ಮೂಡುಬಿದಿರೆ

**ಆಶಾಭಾವನೆ**

‘ಅಸ್ತಮಾ ಗುಣಪಡಿಸ ಬಹುದು!’ (ಡಾ. ಬಿ.ಟಿ. ರುದ್ರೇಶ್) ಆರೋಗ್ಯ ಲೇಖನ ಮಾಹಿತಿಪೂರ್ಣ. ಅಸ್ತಮಾ ಉಸಿರಾಟಕ್ಕೆ ಸಂಬಂಧಿಸಿದ ಸಮಸ್ಯೆಯಾಗಿದ್ದು ಇದು ಅನುವಂಶೀಯವಾಗಿಯೂ ಬರಬಹುದು ಎಂಬುದು ವಾಸ್ತವ. ಅಸ್ತಮಾವನ್ನು ಸಂಪೂರ್ಣವಾಗಿ ಗುಣಪಡಿಸಬಹುದು ಎಂಬುದು ಈ ಕಾಯಿಲೆ ಇರುವವರಿಗೆ ಆಶಾಭಾವನೆ ಮೂಡಿಸುವಂತಿದೆ.

—ವಿ. ಹೇಮಂತಕುಮಾರ, ಬೆಂಗಳೂರು

**ಶತಾಯುಷ್ಯದ ಗುಟ್ಟು**

‘ನಿಮ್ಮ ಪುಟ’ದಲ್ಲಿ ‘ಶತಮಾನ ಕಂಡ ಅಜ್ಜಿ’ (ಚಂದ್ರಕಾಂತ.ಮ.ತಾಳಿಕೋಟಿ) ಶತಾಯುಷಿ ಶಿವಲಿಂಗಮ್ಮ ಅವರನ್ನು ಪರಿಚಯಿಸಿದ್ದು ಓದಿ ಖುಷಿಯಾಯಿತು.

—ಅರವಿಂದ. ಜಿ. ಜೋಷಿ, ಮೈಸೂರು

**ಮಾರ್ಗದರ್ಶಿಯಂತಿದೆ!**

‘ಆಹಾರ’ ಪುಟದಲ್ಲಿ ಪ್ರಕಟವಾದ ಬಾಳೆ ಎಲೆ, ಹೂವು, ಕಾಯಿ, ಹಣ್ಣುಗಳಿಂದ ತಯಾರಿಸಲ್ಪಟ್ಟ ಸವಿರುಚಿಗಳ ಪರಿಚಯ ಎಲ್ಲ ಗೃಹಿಣಿಯರಿಗೆ ಮಾರ್ಗದರ್ಶಿಯಂತಿದೆ.

—ಶೋಭಾ ಎಂ. ಹೆರಕಲ್ಲ, ಕಲಬುರ್ಗಿ

**ಗಮನಸೆಳೆದ ದೃಶ್ಯಕಾವ್ಯ**

‘ನದಿ ಬರೆದ ದೃಶ್ಯಕಾವ್ಯ’ (ಡಾ.ನಾಗವೇಣಿ ಎಂ. ಮಂಚಿ) ಚಿತ್ರ ಲೇಖನ ಆಕರ್ಷಕವಾಗಿದೆ. ಮೂಡುಬಿದರೆಗೆ ಸಮೀಪದಲ್ಲಿರುವ ಎರುಗುಂಡಿ ಫಾಲ್ಸ್ ಕಾಡಿನ ನಡುವೆ ನದಿಯೊಂದು ಬರೆದಿರುವ ದೃಶ್ಯಕಾವ್ಯ ಗಮನ ಸೆಳೆಯಿತು.

—ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ

**ಕಡವಿನ ಕಟ್ಟೆಯಲ್ಲೂ...!**

‘ನದಿ ಬರೆದ ದೃಶ್ಯ ಕಾವ್ಯ’ ಚಿತ್ರ ಬರಹ ಕುತೂಹಲಕಾರಿ. ಇಷ್ಟು ಪ್ರಮಾಣದಲ್ಲಿ ಯಲ್ಲದಿದ್ದರೂ, ಸ್ವಲ್ಪ ಕಡಿಮೆ ಪ್ರಮಾಣದಲ್ಲಿ ಇಂತಹ ಕಲಾ ಶಿಲೆಗಳು ನಮ್ಮ ಊರಿನ ಕಡವಿನ ಕಟ್ಟೆಯ ಭೀಮಾ ನದಿಯಲ್ಲೂ ಇವೆ. ಪ್ರಚಾರದ ಕೊರತೆಯಿಂದಾಗಿ ಸಾರ್ವಜನಿಕರಿಗೆ ಅವುಗಳಿನ್ನೂ ಬೆಳಕಿಗೆ ಬಂದಿಲ್ಲ.

—ಎನ್.ಕೆ. ವೈ. ಶಿರಾಲಿ

**ನದಿ ದಾಟುವ ಪರಿ**

ವಂಡರ್ ಪುಟದಲ್ಲಿ ‘ನದಿ ದಾಟುವ ಈ ಪರಿ’ (ಪ.ರಾಮಕೃಷ್ಣ ಶಾಸ್ತ್ರಿ) ಓದು ಮೈ ಜುಂ ಎನಿಸಿತು. ರೈತರು ಹಾಗೂ ಶಾಲಾ ಮಕ್ಕಳು ಕೇಬಲ್ ಮೂಲಕ ತುಂಬಿ ಹರಿಯುವ ನದಿಯನ್ನು ದಾಟುವ ಚಿತ್ರ ನೋಡಿ ದಿಗ್ಭ್ರಮೆಯಾಯಿತು.

—ಪಿ. ಜಯವಂತ ಪೈ, ಕುಂದಾಪುರ

**ಮನೋಜ್ಞ ಬರಹ**

‘ಸುಖೀಭವ’ ಅಂಕಣದಲ್ಲಿ ಡಾ.ವಿನೋದ್ ಛೆಬ್ಬಿ ಅವರ ಮೋಹನ ಸ್ವಾಮಿಯವರ ಬಗೆಗಿನ ಲೇಖನ ಮನೋಜ್ಞವಾಗಿದೆ.

—ಎಂ.ಎನ್. ಬೆಂಗಳೂರು